ಮಕ್ಕಳಿದ್ದರು ಸಹ, ಅಷ್ಟೇನೂ ಸದೃಢ ಕಾಯವಲ್ಲದ, ಗುಂಗುರು ಕೂದಲಿನ, ಹಣೆಯ ಮೇಲೆ ವಾಳಾ ಇದ್ದ, ಒರಟು ಧ್ವನಿಯ ಲಿಂಗೇಶನನ್ನು ಚಂದ್ರವತಿ ಇಷ್ಟಪಟ್ಟು ಪ್ರೀತಿಸಿ ಮದುವೆಯಾಗಿದ್ದಳು. ಚಂದ್ರವತಿಯ ಪ್ರೀತಿಗೆ ಸೋತುಹೋದ ಲಿಂಗೇಶ ಮೊದಲನೇ ಹೆಂಡತಿಗೆ ತನ್ನ ಅರ್ಧ ಹೊಲ ಮನೆ ಕೊಟ್ಟು, ಅವರ ಪಾಡಿಗೆ ಅವರು ಇರಲು ಹೇಳಿ, ತಾನು ಚಂದ್ರವತಿಯಲ್ಲೇ ಇದ್ದು ಸಂಸಾರ ಮಾಡತೊಡಗಿದ. ಸುಮಾರು ಹದಿನೆಂಟು ವರ್ಷಗಳ ತರುವಾಯ ಚಂದ್ರವತಿ ಮತ್ತು ಲಿಂಗೇಶನ ನಡುವೆ ಬಿರುಕು ಮೂಡಿತು. ಲಿಂಗೇಶ ಈಗ ತನ್ನ ಮೊದಲನೇ ಹೆಂಡತಿ ಹತ್ತಿರ ಹೋಗೋ ಹಾಗಿರಲಿಲ್ಲ, ಇಲ್ಲಿ ಇರುವ ಮನಸ್ಸೂ ಇರಲಿಲ್ಲ. ತನ್ನ ಮೊದಲನೇ ಹೆಂಡತಿಯ ಮಗಳ ಮದುವೆಯಾಗಿತ್ತು. ಒಬ್ಬ ಮಗನಿದ್ದು ಕಾಲೇಜು ಓದುತ್ತಿದ್ದ. ಅದೇ ಕಾಲೇಜಿನಲ್ಲಿ ಇದ್ದ ಹೈಸ್ಕೂಲಿನಲ್ಲಿ ರಾಮಚಂದ್ರನೂ ಓದುತ್ತಿದ್ದ. ಆಗಾಗ ಲಿಂಗೇಶನ ದೊಡ್ಡ ಮಗ ಭೇಟಿಯಾಗುತ್ತಿದ್ದ. ಒಂದು ಸಣ್ಣ ನಗು, ಹೆಂಗಿದ್ದೀಯಾ? ಅಂತ ಕೇಳುವಷ್ಟು ಸೌಜನ್ಯವಿಲ್ಲದ ಆತ ರಾಮಚಂದ್ರನನ್ನು ಇನ್ನಿಲ್ಲದಂತೆ ದ್ವೇಷಿಸುತ್ತಿದ್ದ. ತಾನು ಮೊದಲನೇ ಹೆಂಡತಿ ಮಗ, ರಾಮಚಂದ್ರ ತಮ್ಮಪ್ಪ ಇಟ್ಟುಕೊಂಡಿರುವ ಎರಡನೇ ಹೆಂಡತಿ ಮಗ ಎಂಬ ಭಾವನೆ ಅವನ ನರನಾಡಿಗಳಲ್ಲಿ ಹರಿದಾಡುತ್ತಿದ್ದು, ಹಾಗೆ ಅದು ಅವನ ಮುಖಭಾವದಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು.

ಒಮ್ಮೆ ರಾಮಚಂದ್ರ ಲಿಂಗೇಶನಿಗೆ ಹೇಳಿದ, 'ನನ್ನ ಸಾಲ್ಯಾಗ ಅಣ್ಣ ಸಿಗ್ತಿರುತಾನ, ಮಾತಾಡಸಲ್ಲ' ಅಂದ. 'ಅವ್ನು ಬೇವಕೂಫ ಇದಾನ. ನಿನ್ನ ಹೆಂಗ್ ಮಾತಡಸ್ತಾನ, ಹಾಳಾಗಿ ಹೋಗಲಿ, ನೀ ಅವ್ನು ಮಾತಾಡಿಸಿದರೂ ಮಾತಾಡಬೇಡ' ಅಂತ ರಾಮಚಂದ್ರನ ತಲೆನೇವರಿಸಿದ್ದ. ರಾಮಚಂದ್ರನಿಗೆ ಅಪ್ಪನ ಮೇಲೆ ತುಂಬಾ ಪ್ರೀತಿಯುಂಟಾಗಿ ಗಟ್ಟಿಯಾಗಿ ತಬ್ಬಿಕೊಂಡಿದ್ದ. ಅಪ್ಪನ ಬನೀನಿನ ಮೇಲೆ ಕೆಂಪು ಕೆಂಪುಗೆ ಏನೋ ಕಲೆ ಅವನ ಕೈಗೆ ಹತ್ತಿತು. ಮುಟ್ಟಿ ನೋಡಿದರೆ ರಕ್ತ. ಹಾ ಅಂತ ಸಣ್ಣಗೆ ಚೀರಿದ ಲಿಂಗೇಶ. 'ಅಯ್ಯೋ ಅಪ್ಪ ಏನಾಯಿತು' ಅಂತ ರಾಮಚಂದ್ರ ಗಾಬರಿಗೊಂಡ. 'ಏನಿಲ್ಲ ಏನಿಲ್' ಅಂತ ಲಿಂಗೇಶ ದೂರ ಸರಿದ. ರಾಮಚಂದ್ರನಿಗೆ ಅನುಮಾನ ಬಂದು ಲಿಂಗೇಶನ ಬನೀನು ಎತ್ತಿ ನೋಡಿದ. ಪಕ್ಕೆಯಲ್ಲಾ ಗಾಯವಾಗಿತ್ತು. ಅಷ್ಟರಲ್ಲಿ ಚಂದ್ರವತಿ ಬಂದಳು. 'ಅಪ್ಪನ ಬೆನ್ನಿಗೆ ಏನಾಗ್ಯಾದ?' ಸಿಟ್ಟಿನಿಂದ ರಾಮಚಂದ್ರ ಚಂದ್ರವತಿಯ ಮೇಲೆ ಚೀರಿದ. 'ಕುಂಡೆತುಂಬಿ ಚ್ಯಾಷ್ಟಿ ಮಾಡಿದರೆ ಆಗಲಾರದ ಬಿಡತದೇನು' ಅಂದಳು ಚಂದ್ರವತಿ ಶಾಂತವಾಗಿ. ಲಿಂಗೇಶನಿಗೆ ಚಂದ್ರವತಿಯ ಮಾತಿನಿಂದ ಸಿಟ್ಟು ಬಂದು, ಏನೋ ಬೈದ. ಅದ್ಕೆ ಚಂದ್ರವತಿಯ ಪ್ರತಿ ಬೈಗುಳ. ಜೋರು ಜಗಳ ಶುರುವಾಯಿತು. ರೋಡಿನ ಮೇಲೆ ಹೋಗುತ್ತಿದ್ದ ಜನ ಕರಡಿ ಕುಣಿತ ನೋಡುವವರಂತೆ ಸುತ್ತಲೂ ಜಮಾಯಿಸಿದರು. ಜನ ಬಂದಂತೆಲ್ಲ ಇವರ ಜಗಳ ಇನ್ನೂ ಜೋರಾಗತೊಡಗಿತು. ರಾಮಚಂದ್ರ ಎಷ್ಟು ಹೇಳಿದರೂ ಇಬ್ಬರು ಕಿವಿಗೆ ಹಾಕಿಕೊಳ್ಳದೆ ತಮ್ಮ ತಮ್ಮ ಇತಿಹಾಸ ಪುರಾಣ ಬಿಚ್ಚಿಕೊಳ್ಳುತ್ತ ಜನ ಏನಂತರಾ ಅನ್ನೋದು ಅರಿವಿಲ್ಲದೆ ಬಾಯಿಗೆ ಬಂದಂತೆ ಬೈದುಕೊಳ್ಳುತ್ತ ಮತ್ತಷ್ಟು ಬತ್ತಲಾಗತೊಡಗಿದರು. ರಾಮಚಂದ್ರನಿಗೆ ತಲೆಕೆಟ್ಟು ಏನು ಮಾಡಬೇಕು ತಿಳಿಯದೆ ಅಲ್ಲೆ ಇದ್ದ ಚಿಮಣಿಯಣ್ಣೆಗೆ ಕೈಹಾಕಿ, 'ನೀವಿಬ್ಬರೂ ಈಗ ಸುಮ್ಮನಿದ್ರಿ ಸರಿ, ಇಲ್ಲ ಅಂದ್ರೆ ಈ ಚಿಮಣಿಯಣ್ಣೆ ಕುಡ್ದು ಸತ್ತು ಹೋಗ್ತೀನಿ' ಅಂತ ಹೆದರಿಸಿದ. ಅವರು ಅವನ ಬೆದರಿಕೆಗೆ ಅಂಜದೆ ಕೈಕೈ ಮಿಲಾಯಿಸುತ್ತ ಬಡಿದಾಡತೊಡಗಿದರು.

ಗುಂಪಿನೊಳಗಿನಿಂದ ತೂರಿಬಂದ ಮನೆಯ ಪಕ್ಕದ ಹಾಜಾಬಿ ಅತ್ತೆ (ಊರಲ್ಲಿ ಒಮ್ಮೆ ಗ್ರಾಮಪಂಚಾಯಿತಿಯ ಅಧ್ಯಕ್ಷೆ ಆಗಿದ್ದಳು. ಈಗ ಇವಳ ಮಗ ಇಸ್ಮಾಯಿಲ್ ಗ್ರಾಮಪಂಚಾಯಿತಿ ಮೆಂಬರ್) ರಾಮಚಂದ್ರನ ಕೈಯಾಗಿನ ಚಿಮಣಿಯಣ್ಣೆ ಡಬ್ಬಿ ಕಸಗಂಡು, 'ಬಾಳಿ ಬದುಕಬೇಕಾದ ಹುಡುಗ ಇದ್ದಿ. ಇವರ ಸಲುವಾಗಿ ನೀನ್ಯಾಕ ಸಾಯ್ತಿ' ಅಂತ ರಾಮಚಂದ್ರನಿಗೂ ಆಕಾಶ ಭೂಮಿ ಒಂದು ಮಾಡಿ ಜಗಳವಾಡುತ್ತಿದ್ದ ಲಿಂಗೇಶ ಚಂದ್ರವತಿಗೂ ಬೈದು ಸುಮ್ಮನಾಗಿಸಿದಳು. ಮೊದಲ ಬಾರಿಗೆ ರಾಮಚಂದ್ರನಿಗೆ ತಾನು ಅನಾಥ ಎಂಬ ಭಾವ ಮೂಡಿ ಅಳತೊಡಗಿದ. ಆದಿನ ರಾತ್ರಿ ಯಾರೊಬ್ಬರು ಊಟ ಮಾಡದೆ ಹಾಗೆ ಮಲಗಿಕೊಂಡರು. ಬೆಳಿಗ್ಗೆ ಎದ್ದಾಗ ಚಂದ್ರವತಿ ಕಾಟಾಚಾರಕ್ಕೆ ಹೋಟೆಲ್ ತೆರೆದಿದ್ದಳು. ರಾಮಚಂದ್ರ ಎದ್ದು ಹೋಟೆಲ್‌ನಲ್ಲಿ ಇದ್ದ ಒಂದಿಬ್ಬರು ಗಿರಾಕಿಗಳಿಗೆ ಚಹಾ ಕೊಟ್ಟು ಕುಳಿತ.